"ಇದು ಕರೆಕ್ಟ್ ನಂಬರ್, ವಿಷಯಕ್ಕೆ ಬನ್ನಿ" ಗೌಡ್ತಿ ಅಮ್ಮ ರಾಂಗಾದರು.

"ನಾನು ದೀಪಕ್ ಅಂತ. ಐವತ್ತು ವರ್ಷಗಳ ಹಿಂದೆ ಸಾಯಿಬಾಬಾ ಹೈಯರ್ ಸೆಕೆಂಡರಿ ಶಾಲೆಯಲ್ಲಿ ನೀವು ಪಿ.ಯು.ಸಿ. ಮಾಡುತ್ತಿದ್ದಾಗ ನಾನು ನಿಮ್ಮ ಕ್ಲಾಸ್‌ಮೇಟಾಗಿದ್ದೆ. ತರಗತಿಯಲ್ಲಿ ಎದುರು ಕೂರುತ್ತಿದ್ದೆ. ಕ್ಲಾಸಲ್ಲಿ ಫಸ್ಟ್ ಬರ್ತಿದ್ದೆ. ಈಗಲಾದ್ರು ನೆನಪಿಗೆ ಬರುತ್ತಾ?"

"ಇಲ್ಲ. ಐವತ್ತು ವರ್ಷದ ಹಿಂದಿನ ಘಟನೆಯಲ್ವಾ? ಆ ಕ್ಲಾಸಲ್ಲಿ ನನಗೆ ನೆನಪಿರೋದು ಕಾಸರಗೋಡಿನ ಪ್ರೇಮಾ ಮಾತ್ರ. ನನ್ನದು ಒಂದು ವರ್ಷದ ಪಿ.ಯು.ಸಿ.ಯ ಲಾಸ್ಟ್ ಬ್ಯಾಚ್. ಹಾಗಾಗಿ ಮರೆತಿರಬೇಕು."

"ಬಟ್ ನನಗೆ ನೆನಪಿದೆ ಮಂದಾಕಿನಿ. ನೀವು ತರಗತಿಯಲ್ಲಿ ಹಿಂದೆ ಕೂರ್ತಿದ್ರಿ. ಏಕೆಂದರೆ ನೀವು ತುಂಬಾ ಉದ್ದ ಇದ್ರಿ. ನಿಮ್ಮ ಮುಖದಲ್ಲಿ ಸಿರಿವಂತರ ಮನೆಯ ಹುಡುಗಿಯ ಅಸಾಧಾರಣ ಕಳೆಯಿತ್ತು. ನೀವು ಅರಳು ಹುರಿದಂತೆ ಇಂಗ್ಲಿಷ್ ಮಾತಾಡ್‌ತಿದ್ರಿ. ಅದಕ್ಕೆ ಅಧ್ಯಾಪಕರೆಲ್ಲರೂ ನಿಮಗೆ ತುಂಬಾ ಗೌರವ ತೋರುತ್ತಿದ್ರು. ನಿಮ್ಮ ತಂದೆ ಪುಟ್ಟೇ ಗೌಡ್ರಿಗೆ 500 ಎಕ್ರೆ ಕಾಫಿ ತೋಟ ಇದೆ. ಅದರಲ್ಲಿ ಕೂಲಿಯಾಳುಗಳಾಗಿ ಕೆಲಸ ಮಾಡುವವರೆಲ್ಲಾ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯವರು.

